**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1050/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಕಿರಣ ಬಿ.ಆರ್. | ಪ್ರಾಸಾ-9 |
| ತಂದೆಯ ಹೆಸರು | : ರಾಜು | ಚಾಸಾ-15 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಬೀಟ್ ಫಾರೆಸ್ಟರ್ | ದಿನಾಂಕಃ 10.07.2026. |
| ವಾಸಸ್ಥಳ | : ಶೃಂಗೇರಿ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

1. ನಾನು 2018 ರಿಂದ 2020 ರವರೆಗೂ ಮೂಡಿಗೆರೆ ವಿಭಾಗದಲ್ಲಿ, ಬೈರಾಪುರ ಬೀಟ್ ನಲ್ಲಿ ಬೀಟ್ ಫಾರೆಸ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.17.02.2019 ರಂದು ಫ್ರಾಸಾ-3 ಚಿದಾನಂದ್ ಮತ್ತು ಫ್ರಾಸಾ-5 ಶಿಲ್ಪ ಚಾಸಾ-10 ರಘು ಮತ್ತು ನಾನು ಫ್ರಾಸಾ-1 ರವರ ನಿರ್ದೇಶನದ ಮೇರೆಗೆ 2 ನೇ ಆರೋಪಿಯ ಮನೆಯಲ್ಲಿ ದಿ.19.02.2019 ರಂದು ಮ.12.00 ಗಂಟೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಅದಕ್ಕೆ ಸ್ಥಳೀಯ ಪಂಚರು ನಂಜುಂಡೇಗೌಡ, ಚಂದ್ರೇಗೌಡ ಮತ್ತು ಜ್ಯೋತಿ ಚಾಸಾ-6 ರಿಂದ 8 ರವರನ್ನು ಬರಮಾಡಿಕೊಂಡಿರುತ್ತಾರೆ.

3. 2 ನೇ ಆರೋಪಿಯ ಮನೆ ಬೀಗ ಹಾಕಿದ್ದು, ಅಲ್ಲಿ ಯಾರು ಇರದ ಕಾರಣ ಪಂಚರ ಸಹಾಯದಿಂದಲೇ ಬೀಗವನ್ನು ತೆರೆಸಿರುತ್ತೇವೆ. ಮನೆ ಒಳಗೆ ನಾವುಗಳು ಶೋಧನೆ ಮಾಡಿದಾಗ ಅಟ್ಟದಲ್ಲಿ ಕಾಡುಪ್ರಾಣಿಯ ಅಂಗಾಗಳು ಕಂಡುಬಂದಿರುತ್ತವೆ. ಅದನ್ನು ಪರಿಶೀಲಿಸಿದಾಗ ಎರಡು ಒಂಟಿ ಕಡವೆ ಕೊಂಬುಗಳು, ಒಂದು ಜೋಡಿ ಕಾಡು ಕುರಿಯ ಕೊಂಬು, ಬಳಸಿದ 12 ಕಾಟ್ರಿಡ್ಜ್‌ಗಳು ಇದ್ದವು. ಸದರಿ ವಸ್ತುಗಳನ್ನು ಮಧ್ಯಾಹ್ನ 1.30 ರಿಂದ 3.15 ರವರೆಗೂ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದಿದ್ದೇವೆ.

4. ಮಹಜರ್ ಕಾಲಕ್ಕೆ ನಾನೇ ಫೋಟೋವನ್ನು ನನ್ನ ಮೊಬೈಲ್ ನಲ್ಲಿ ತೆಗೆದಿರುತ್ತೇನೆ. ಆ ಫೋಟೋಗಳನ್ನು ನಾನು ಪ್ರಿಂಟ್ ಮಾಡಿ ಚಾಸಾ-1 ರವರಿಗೆ ನೀಡಿರುತ್ತೇನೆ. ನಂತರ ಮನೆಯ ಬಾಗಿಲನ್ನು ಹಾಕಿ ಬೀಗವನ್ನು ಸೀಲ್ ಮಾಡಲಾಗಿರುತ್ತದೆ. ಮಹಜರ್ ಗೆ ನಾನು ಸಹಿಯನ್ನು ಮಾಡಿರುತ್ತೇನೆ. ಮೇಲೆ ಹೇಳಿದ ಫ್ರಾಣಿಯ ಅಂಗಾಗಳನ್ನು ನನ್ನ ಮುಂದೆ ವಶಪಡಿಸಿಕೊಳ್ಳಲಾಗಿರುತ್ತದೆ. ನನ್ನ ಜೊತೆ ಪಂಚರು ಸಹಾ ಸಹಿ ಮಾಡಿರುತ್ತಾರೆ.

5. ಸಾಕ್ಷಿಯು ನಿಪಿ-4 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4(ಎಫ್) ಎಂದು ಗುರುತಿಸಲಾಯಿತು.

6. ಸಾಕ್ಷಿಯು ನಿಪಿ-8 ಮತ್ತು 12 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ಎಂ.ಒ,1 ರಿಂದ 6 ರ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

1. ನಾನು ಆರೋಪಿತ ಸ್ಥಳಕ್ಕೆ ಹೋದಾಗ ದಿಬ್ಬೇಗೌಡರವರ ಮನೆಯವರನ್ನು ಮಹಜರ್ ಕ್ರಮಕ್ಕೆ ಬರುವಂತೆ ನಾವು ಕೇಳಿರುವುದಿಲ್ಲ. ನೀವು ಸ್ಥಳಕ್ಕೆ ಹೋಗದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

2. ನಿಪಿ-8 ನ್ನು ನಾನು ಕಚೇರಿಯಲ್ಲಿ ನಾನೇ ತೆಗೆದಿರುತ್ತೇನೆ. ಮಹಜರ್ ನಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ಅದರ ಬಗ್ಗೆ ನಮೂದಿರುವುದಿಲ್ಲ ಎಂದರೆ ಸರಿ.

3. ನೀವು ಮಹಜರ್ ಕ್ರಮಕ್ಕೆ ಹೋದಾಗ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು ಎಂದರೆ ಸರಿ.

4. ನಿಪಿ-12 ರಲ್ಲಿ ಎರಡು ಕತ್ತಿಗಳು ಸಹಾ ಇದೆ ಎಂದರೆ ಸರಿ. ಆದರೆ ಮಹಜರ್ ನಲ್ಲಿ ವಶಪಡಿಸಿಕೊಂಡಿರುವುದಿಲ್ಲ.

5. ಸಾಮಾನ್ಯವಾಗಿ ಮಹಜರ್ ಕಾಲದಲ್ಲಿ ಸಿಕ್ಕ ವಸ್ತುಗಳನ್ನು ನಮೂದು ಮಾಡುತ್ತಾರೆ ಎಂದರೆ ಸರಿ.

6.ಬೀಗ ಹೊಡೆದು ಒಳಗೆ ಹೋಗುವ ಮುಂಚೆ ಬೇರೆ ಯಾವುದಾದರೂ ಕ್ರಮ ಮಾಡಿದ್ದೀರ ಎಂದರೆ ಮಾಡಿಲ್ಲ.

7. ಪಂಚರ ಮುಂದೆ ನಾವುಗಳನ್ನು ಅಂಗಶೋಧನೆ ಮಾಡಿರುವುದಿಲ್ಲ. ಎಂ.ಒ.1 ರಿಂದ 6 ಗಳನ್ನು ನೀವೇ ತೆಗೆದುಕೊಂಡು ಹೋಗಿ ಆರೋಪಿಗಳ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದೀರ ಎಂದರೆ ಸರಿಯಲ್ಲ.

8. ಆರೋಪಿತ ಸ್ಥಳದಲ್ಲಿ ನೀವು ಮಹಜರ್ ನ್ನು ಬರೆಯದೇ ಠಾಣೆಯಲ್ಲಿ ಸೃಷ್ಟಿಸಿದ್ದೀರ ಎಂದರೆ ಸರಿಯಲ್ಲ.

9. ನೀವು ನಿಮ್ಮ ಮೇಲಾಧಿಕಾರಿಗಳೊಂದಿಗೆ ಆರೋಪಿತ ಸ್ಥಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ.

10. ದಿನಾಂಕ ಮತ್ತು ಸಮಯವನ್ನು ಮಹಜರ್ ನಲ್ಲಿ ಬೇರೆ ಶಾಹಿಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ.

11. ನಾನು ಮಹಜರ್ ಗೆ ಸಹಿ ಮಾಡುವಾಗ ದಿನಾಂಕವನ್ನು ನಮೂದು ಮಾಡಿತ್ತು.

12. ನಿಪಿ-4 ರಲ್ಲಿ ಯಾವುದೇ ದಿನಾಂಕ ಇಲ್ಲ ಎಂದರೆ ಸರಿ. ಇದನ್ನು ಕಚೇರಿಯಲ್ಲಿ ಸೃಷ್ಟಿ ಮಾಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.